ಯೂನಿವರ್ಸಿಟಿಯ ವಿದ್ಯಾರ್ಥಿಗಳು ಅಲ್ಲಲ್ಲಿ ರೂಮು ಮಾಡಿಕೊಂಡು ವಾಸವಿದ್ದಾರೆ. ಅವರೇ? ಗೃಹಿಣಿಯರೇ? ಯಾರು ಇವರೆಲ್ಲ? ಅಮೆರಿಕದಲ್ಲಿ ಮಕ್ಕಳು ಹೈಸ್ಕೂಲಿಗೆ ಹೋಗಲು ಶುರುವಾದೊಡನೆ ಗರ್ಲ್‌ಫ್ರೆಂಡು – ಬಾಯ್‌ಫ್ರೆಂಡುಗಳನ್ನು ಇಟ್ಟುಕೊಳ್ಳುವುದು ಅವರ ವಲಯಗಳಲ್ಲಿ ಘನತೆಯ ವಿಷಯವಾಗಿರುವುದನ್ನು ಓದಿ, ಕೇಳಿ ಬಲ್ಲೆ. ಇವರೆಲ್ಲ ಅವನ ಗರ್ಲ್‌ಫ್ರೆಂಡುಗಳೇ ಹಾಗಾದರೆ? ಇಷ್ಟೊಂದು ಜನ? ಮಾಕೋ ಇನ್ನ್ಯಾರಿಗೋ ದೇಹ ಮಾರಿಕೊಳ್ಳುತ್ತಿಲ್ಲ ತಾನೇ? ಡ್ರಗ್ಸ್ ಮಾಡುತ್ತಿಲ್ಲ ತಾನೇ? ಯಾವುದಾದರೂ ಕಾನೂನು ಬಾಹಿರ ಚಟುವಟಿಕೆ ನಡೆಸುತ್ತಿಲ್ಲ ತಾನೇ? ಥೂ, ಮುಂದಿನ ವರ್ಷ ದೂರದೂರಿನಲ್ಲಿ ಸೀಟು ಸಿಕ್ಕಿ ಇವನು ನನ್ನ ಮನೆಯಿಂದ ತೊಲಗಿದರೆ ಸಾಕು. ನನ್ನ ಜೀವ ತಿನ್ನಲೆಂದೇ ಹುಟ್ಟಿದ್ದಾನೆ ಈ ದರಿದ್ರ ನಾಯಿ ಅಂತೆಲ್ಲ ನಡುಗುತ್ತ ಕಂಪಿಸುತ್ತ ಶಪಿಸಿಕೊಂಡೆ.

ಇಂಥ ಸೂಕ್ಷ್ಮಗಳನ್ನೆಲ್ಲ ಹೇಳಿದರೆ ಅರ್ಥಮಾಡಿಕೊಳ್ಳಲಾರದಷ್ಟು ದೂರವಿದ್ದಾನೆ ಸುಹಾಸ. ಟೋರಿ ಯಾಕೋ ಫೋನು ಎತ್ತುತ್ತಿಲ್ಲ. ರಾತ್ರಿಯೆಲ್ಲ ಎಚ್ಚರಿದ್ದು ದಿನವೆಲ್ಲ ಮುಖ ತಪ್ಪಿಸಿ ತಿರುಗುವ ಈ ಮಾಕೋ ಯಾರು? ಇವನನ್ನು ಹೇಗೆ ಸಲಹಬೇಕು ನಾನು?

★★★

ಅಂದು ಒಮ್ಮೆಲೇ ಐದಾರು ಜನ ಮೆಟ್ಟಿಲು ಹತ್ತಿ ಬಂದಂತೆ ಸದ್ದಾದೊಡನೆ ನನಗೆ ಎಚ್ಚರವಾಯಿತು. ಬೆಳಗಿನ ಜಾವ ಮೂರೋ ನಾಲ್ಕೋ ಆಗಿರಬಹುದು. ಮಾಕೋನನ್ನು ಬಿಟ್ಟು ಇಬ್ಬರಾದರೂ ಹುಡುಗರಿರಬೇಕು. ಮೂವರು ಹುಡುಗಿಯರಿರಬಹುದು. ಇನ್ನು ನನಗೆ ಸುಮ್ಮನಿರಲು ಸಾಧ್ಯವಿಲ್ಲ ಅನ್ನಿಸಿತು. ಎದ್ದು ಕೂದಲಿಗೆ ಬೋ ಹಾಕಿಕೊಂಡು, ನೈಟ್ ಡ್ರೆಸ್ಸಿನ ಮೇಲೆಯೇ ಒಂದು ಸ್ವೆಟರ್ ತೊಡುತ್ತ ಹೊರ ನಡೆದೆ. ಕೈಗಳು ಅದುರುತ್ತಿದ್ದವು. ದಡದಡ ಕಾಲುಗಳನ್ನು ಬಡಿಯುತ್ತ ಮಾಕೋನ ಕೋಣೆಗೆ ಹೋದೆ. ಬಾಗಿಲು ಮುಚ್ಚಿತ್ತು. ಒಮ್ಮೆಲೇ ಬಾಗಿಲು ತಳ್ಳುವ ಧೈರ್ಯವಾಗಲಿಲ್ಲ. ಮಾಕೋ ಎಂದು ಒಮ್ಮೆ ಕರೆದು ಅರೆಕ್ಷಣ ಬಿಟ್ಟು ಕದ ದೂಡಿದೆ.

ನನ್ನ ಊಹೆ ಸರಿಯಾಗಿತ್ತು. ಮಾಕೋ ಸೇರಿದಂತೆ ಮೂವರು ಹುಡುಗರು, ಮೂವರು ಹುಡುಗಿಯರು ಅಲ್ಲಿದ್ದರು. ಎಲ್ಲರೂ ಅವನದೇ ವಯಸ್ಸಿನವರು. ಕೋಣೆಯ ಆರು ಮೂಲೆಗಳನ್ನು ಹಿಡಿದು ಒಂದೊಂದು ಪುಸ್ತಕ ತೆರೆದು ಕುಳಿತಿದ್ದರು. ನಾನು ಬರುವ ಸದ್ದು ಕೇಳಿಯೇ ದೂರ ಸರಿದು ಕೂತಿರಬೇಕು ಅಂದುಕೊಂಡೆ.

“ವಾಟ್ ಆರ್ ಯೂ ಡೂಯಿಂಗ್ ಮಾಮ್? ನೀನು ಹೀಗೆ ಮಾಡಬಾರದು. ನನ್ನ ಪ್ರೈವಸಿಯನ್ನು ಅತಿಕ್ರಮಣ ಮಾಡಬಾರದು” ಮಾಕೋ ಕೀರಲು ದನಿಯಲ್ಲಿ ಚೀರಿದ. ಕೋಣೆಯಲ್ಲಿದ್ದ ಆರು ಜೊತೆ ಕಣ್ಣುಗಳು ನನ್ನನ್ನೇ ದಿಟ್ಟಿಸುತ್ತಿದ್ದವು. ತಕ್ಷಣ ಸಾರಿ ಹೇಳಿ ಹೊರಬಂದುಬಿಟ್ಟೆ.

ಹೊರಕೋಣೆಗೆ ಬಂದು ಸೋಫಾದಲ್ಲಿ ಕುಳಿತ ಮೇಲೆ ಹಾಗೆ ಹೊರಬರಬಾರದಿತ್ತು ಅನ್ನಿಸಿತು. ಪ್ರೈವಸಿಯಂತೆ ಪ್ರೈವಸಿ. ಮೊನ್ನೆ ಮೊನ್ನೆಯ ತನಕ ಆಯಿ ಆಯಿ ಎಂದು ಹೋದಲ್ಲೆಲ್ಲ ಬಂದು ನನ್ನ ಕಾಲು ತಬ್ಬಿಕೊಳ್ಳುತ್ತ, ನಾನು ಪಕ್ಕದಲ್ಲಿರದೇ ನಿದ್ದೆ ಮಾಡುವುದೇ ಇಲ್ಲ ಅಂತ ಹಟ ಹಿಡಿಯುತ್ತಿದ್ದ ಪೋರನಿಗೆ ಈಗ ಹಠಾತ್ತನೆ ಪ್ರೈವಸಿ ಬೇಕಾಯಿತೇ? ನನ್ನ ಮನೆಯಲ್ಲೇ ನನ್ನ ಕಣ್ಣು ತಪ್ಪಿಸಿ ತನ್ನದೇ ರಾಜ್ಯ ನಡೆಸುತ್ತಿದ್ದಾನಲ್ಲ ಇವನು. ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಂಡು ಮತ್ತೆ ಮಾಕೋನ ಕೋಣೆಗೆ ಹೋದೆ. ಈ ಬಾರಿ ಬಾಗಿಲು ಬಡಿಯಲಿಲ್ಲ. ಕದ ತೆಗೆಯುತ್ತಿದ್ದಂತೆ ಒಳಗೆ ನಡೆಯುತ್ತಿದ್ದ ಪಿಸುಮಾತುಗಳೆಲ್ಲ ಒಮ್ಮೆಲೇ ಸ್ತಬ್ಧವಾದವು.

“ನೀವೆಲ್ಲರೂ ದಯವಿಟ್ಟು ನಿಮ್ಮ ಮನೆಗಳಿಗೆ ಹೋಗಿ. ಹೀಗೆ ಅರ್ಧರಾತ್ರಿಯಲ್ಲಿ ಬೇರೆಯವರ ಮನೆಯಲ್ಲಿ ಸೇರಬಾರದು. ಇದು ರಿಪೀಟ್ ಆದರೆ ನಿಮ್ಮ ಪೇರೆಂಟ್ಸ್‌ಗೆ ಕರೆ ಮಾಡಬೇಕಾಗುತ್ತದೆ.”

ಆದಷ್ಟು ಶಾಂತವಾಗಿ ಹೇಳಲು ಪ್ರಯತ್ನಿಸಿದೆ. ಆ ಐದೂ ಜನ ಗಡಿಬಿಡಿಯಲ್ಲಿ ತಮ್ಮ ಬ್ಯಾಗುಗಳನ್ನು